ಪ್ರಾಥಮಿಕ ಆರೋಗ್ಯ ಕೇಂದ್ರ, ಭಾಗಮಂಡಲ, ಇಲ್ಲಿ ಒಂದು ಸ್ಥಾನ ಮಂಜೂರಾಗಿರುವುದು ಖಾಲಿ ಇದೆ. ವೈದ್ಯಾಧಿಕಾರಿಯನ್ನು ತೈನಾತಿ ಮಾಡಿದ್ದರು ಅವರು ಕೆಲಸಕ್ಕೆ ಹಾಜರಾಗಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರ, ಸುಂಟಿಕೊಪ್ಪ, ಇಲ್ಲಿ ಮಂಜೂರಾಗಿರುವುದು ನಾಲ್ಕು ಹುದ್ದೆಗಳು. ಕೆಲಸ ಮಾಡುತ್ತಾ ಇರತಕ್ಕಂಥವರು ಇಬ್ಬರು, ಇನ್ನು ಎರಡು ಖಾಲಿ ಇವೆ. ಪ್ರಾಥಮಿಕ ಆರೋಗ್ಯ ಕೇಂದ್ರ ಶನಿವಾರ ಸಂತೆ, ಇಲ್ಲಿಗೆ ಮೂರು ಸ್ಥಾನಗಳು ಮಂಜೂರಾಗಿವೆ. ಆ ಮೂರು ಸ್ಥಾನದಲ್ಲೂ ಕೆಲಸ ಮಾಡುತ್ತಿದ್ದಾರೆ. ಖಾಲಿ ಇಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರ ಮಡಿಕೇರಿ ಮಂಜೂರಾಗಿರುವುದು ೪ ಸ್ಥಾನಗಳು. ಇಬ್ಬರು ಕೆಲಸ ಮಾಡುತ್ತಿದ್ದಾರೆ, ಎರಡು ಸ್ಥಾನಗಳು ಖಾಲಿ ಇವೆ. ಪ್ರಾಥಮಿಕ ಆರೋಗ್ಯ ಕೇಂದ್ರ ಚಾಲರೆ, ಇಲ್ಲಿ ಮಂಜೂರಾಗಿರುವ ಹುದ್ದೆ ಎರಡು. ಒಬ್ಬರು ಕೆಲಸ ಮಾಡುತ್ತಿದ್ದಾರೆ, ಒಂದು ಸ್ಥಾನ ಖಾಲಿ ಇದೆ.

ಪ್ರಾಥಮಿಕ ಆರೋಗ್ಯ ಘಟಕಗಳು (೨೩)

ಪ್ರಾಥಮಿಕ ಆರೋಗ್ಯ ಘಟಕ, ಚಾಮನ್‌ದಾನೆ, ಇಲ್ಲಿ ಮಂಜೂರಾಗಿರುವುದು ಒಂದು ಹುದ್ದೆ, ಒಬ್ಬರು ಕೆಲಸ ಮಾಡುತ್ತಿದ್ದಾರೆ ಹುದ್ದೆಗಳು ಖಾಲಿ ಇಲ್ಲ. ಮುರ್‌ನಾಡ್ ಇಲ್ಲಿಗೆ ಮುಂಜೂರಾಗಿರುವುದು ಒಂದು ಹುದ್ದೆ, ಒಬ್ಬರು ಕೆಲಸ ಮಾಡುತ್ತಿದ್ದಾರೆ ಹುದ್ದೆಗಳು ಖಾಲಿ ಇಲ್ಲ. ಸಂಪಜೆ ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಒಂದು, ಒಬ್ಬರು ಕೆಲಸ ಮಾಡುತ್ತಿದ್ದಾರೆ, ಖಾಲಿ ಇಲ್ಲ. ಬೆಟ್ಟಹಳ್ಳಿಗೆ ಮಂಜೂರಾಗಿರುವುದು ಒಂದು, ಅದು ಭರ್ತಿಯಾಗಿದೆ. ಹೆಬ್ಬಾಲೆಗೆ ಮಂಜೂರಾಗಿರುವುದು ಒಂದು, ಅದು ಭರ್ತಿಯಾಗಿದೆ. ಮಾದಾಪುರ ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಎರಡು ಹುದ್ದೆಗಳು. ಒಬ್ಬರು ಕೆಲಸ ಮಾಡುತ್ತಿದ್ದಾರೆ, ಒಂದು ಹುದ್ದೆ ಖಾಲಿ ಇದೆ ಇಲ್ಲಿಗೆ ವೈದ್ಯಾಧಿಕಾರಿಯನ್ನು ತೈನಾತಿ ಮಾಡಿತ್ತು. ಆದರೆ ಅವರು ಹಾಜರಾಗಿಲ್ಲ. ಕುಶಾಲನಗರ ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಶ್ರೀರಂಗ ಲ ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಅಲ್ಲಿ ಕೆಲಸ ಮಾಡುತ್ತಿದ್ದಾರೆ, ನಂಜರಾಯಪಟ್ಟಣಕ್ಕೆ ಮಂಜೂರಾಗಿರುವುದು ಒಂದು ಹುದ್ದೆ ಅಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಕೂಡ್ಲಿಪೇಟೆಗೆ ಮಂಜೂರಾಗಿರುವುದು ಒಂದು ಹುದ್ದೆ. ಆ ಹುದ್ದೆ ಭರ್ತಿಯಾಗಿಲ್ಲ. ಶಾಂತಹಳ್ಳಿ ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಅದು ಖಾಲಿ ಇದೆ. ಗೌಡಹಳ್ಳಿ ಘಟಕಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಗೋಣಿಕೊಪ್ಪಲು, ಇಲ್ಲಿ ಮಂಜೂರಾಗಿರುವುದು ಎರಡು ಹುದ್ದೆಗಳು. ಎರಡು ಹುದ್ದೆಗಳಲ್ಲಿಯೂ ಕೆಲಸ ಮಾಡುತ್ತಿದ್ದಾರೆ, ಮೂರ್‌ನಾಡ್ ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಅದು ಭರ್ತಿಯಾಗಿದೆ. ಶ್ರೀಮಂಗಲ ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಅದು ಭರ್ತಿಯಾಗಿದೆ. ಕಾನೂರು ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಗೈರು ಹಾಜರಿಯಿಂದ ಖಾಲಿ ಇದೆ. ಸಿದ್ದಾಪುರಕ್ಕೆ ಮಂಜೂರಾಗಿರುವುದು ಎರಡು ಹುದ್ದೆ. ಒಬ್ಬರು ಕೆಲಸ ಮಾಡುತ್ತಿದ್ದಾರೆ, ಒಂದು ಹುದ್ದೆ ಖಾಲಿ ಇದೆ. ಮಹಿಳಾ ವೈದ್ಯಾಧಿಕಾರಿಯನ್ನು ತೈನಾತಿ ಮಾಡಿತ್ತು, ಆವರು ಹಾಜರಾಗಲಿಲ್ಲ. ಕಾಟ್ಟಿ ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಎರಡು ಹುದ್ದೆ, ಒಬ್ಬರು ಕೆಲಸ ಮಾಡುತ್ತಿದ್ದಾರೆ, ಒಂದು ಹುದ್ದೆ ಖಾಲಿ ಇದೆ. ತಿತಿಮತಿ ಘಟಕಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಅದು ಭರ್ತಿಯಾಗಿದೆ. ಪಾಲ್ಲಿಬೆಟ್ಟ ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಅದು ಭರ್ತಿಯಾಗಿದೆ. ಹಾರಂಗಿ ಯೋಜನೆ ಚಿಕಿತ್ಸಾಲಯಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಅದು ಭರ್ತಿಯಾಗಿದೆ. ಗುಡ್ಡೆಹೊಸೂರು ಸಂಚಾರಿ ಗಿರಿಜನ ಆಸ್ಪತ್ರೆಗೆ ಮಂಜೂರಾಗಿರುವುದು ಒಂದು ಹುದ್ದೆ. ಅದು ಖಾಲಿ ಇದೆ. ಕುಶಾಲನಗರ ಆರೋಗ್ಯ ಘಟಕಕ್ಕೆ ಮಂಜೂರಾಗಿರುವುದು ಒಂದು ಹುದ್ದೆ. ಆಲ್ಲಿ ಕೆಲಸ ಮಾಡುತ್ತಿದ್ದಾರೆ. ಖಾಲಿ ಇಲ್ಲ. ಹೀಗೆ ಕೊಡಗು ಜಿಲ್ಲೆಯಲ್ಲಿ ಒಟ್ಟು ೬೩ ಹುದ್ದೆಗಳು ಮಂಜೂರಾಗಿದ್ದು, ಅವುಗಳಲ್ಲಿ ೫೭ ಪುರುಷ ವೈದ್ಯರುಗಳ ಹುದ್ದೆಗಳು, ಮತ್ತು ೬ ಮಹಿಳಾ ವೈದ್ಯರುಗಳ ಹುದ್ದೆಗಳು. ಈ ಮಂಜೂರಾಗಿರುವ ಹುದ್ದೆಗಳಲ್ಲಿ ೧೮ ಪುರುಷ ವೈದ್ಯರುಗಳ ಹುದ್ದೆ ಮತ್ತು ೪ ಮಹಿಳಾ ವೈದ್ಯರುಗಳ ಹುದ್ದೆಗಳು ಖಾಲಿ ಇವೆ.

ಅಧ್ಯಕ್ಷರು — ಕೊಡಗು ಜಿಲ್ಲೆಯದು ಮಾತ್ರ ಹೇಳಿಬಿಡಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಈಗಾಗಲೇ ಕೆಲವು ಡಾಕ್ಟರುಗಳನ್ನು ತೈನಾತಿ ಮಾಡಿದ್ದೇವೆ. ಖಾಲಿ ಇರತಕ್ಕ ಜಾಗಗಳಿಗೆ ಆದಷ್ಟು ಜಾಗ್ರತೆ ವೈದ್ಯರುಗಳನ್ನು ನೇಮಕ ಮಾಡುತ್ತೇವೆ.

ಅಧ್ಯಕ್ಷರು.—ಅಷ್ಟು ಹೇಳಿಬಿಡಿ. ನೀವು ಇಂದು ಏನು ಭರವಸೆ ಕೊಟ್ಟರೂ, ನಾಳೆ ಅದು ಅಷೂರೆನ್ಸ್ ಕಮಿಟಿಗೆ ಬರುತ್ತದೆ.

೫) ರಾಜ್ಯದಲ್ಲಿ ಶುಶ್ರೂಷಾ ನಿರ್ದೇಶನಾಲಯವನ್ನು ರಚಿಸುವ ಬಗ್ಗೆ

ಶ್ರೀ ಕೆ ಹೆಚ್ ಶ್ರೀನಿವಾಸ್ (ಶಿವಮೊಗ್ಗ) ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಶುಶ್ರೂಷೆ ವೃತ್ತಿಯಲ್ಲಿರುವವರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು ಸರ್ಕಾರಕ್ಕೆ ಶುಶ್ರೂಷಕರ ಸಂಘ, ಕರ್ನಾಟಕ, ಎಂಬ ಹೆಸರಿನ ಸಂಸ್ಥೆಯ ಮೂಲಕ ಶುಶ್ರೂಷಕ ವೃತ್ತಿಯವರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಸರಕಾರದ ಮುಂದೆ ಕಾಲಕಾಲಕ್ಕೆ ಸೂಕ್ತ ರೀತಿಯಲ್ಲಿ ಮಂಡಿಸಿದ್ದು, ಶುಶ್ರೂಷಕ ವೃತ್ತಿ ಹಾಗೂ ಶುಶ್ರೂಷಕ ವೃತ್ತಿಪರರನ್ನ ಆರೋಗ್ಯ ಇಲಾಖೆಯಲ್ಲಿ ಕಡೆಗಾಣಿಸುತ್ತಿರುವ ಮಲತಾಯಿ ಧೋರಣೆಯ ಬಗ್ಗೆ ತೀವ್ರ ಪ್ರತಿಭಟನೆಯನ್ನು ಸಹ ಮಾಡಿರುತ್ತಾರೆ. ಶುಶ್ರೂಷಕರು ಎದುರಿಸುತ್ತಿರುವ ಸಮಸ್ಯೆಗಳನ್ನು ನಿರ್ವಹಿಸಲು ಒಂದು ಪ್ರತ್ಯೇಕ ಶುಶ್ರೂಷೆ ನಿರ್ದೇಶನಾಲಯ ರಚನೆ ಆಗಬೇಕು. ಎಂಬುದು ತುಂಬಾ ಪ್ರಮುಖವಾದ ಬೇಡಿಕೆ ಆಗಿದೆ. ಸದರಿ ಬೇಡಿಕೆಯನ್ನು ಸರ್ಕಾರ ತಾತ್ವಿಕವಾಗಿ ಒಪ್ಪಿಕೊಂಡಿದ್ದು ೧೯೮೬-೮೭ನೇ ಸಾಲಿನ ಆಯವ್ಯಯ ಮುಂಗಡ ಪತ್ರದಲ್ಲಿ ಶುಶ್ರೂಷ ನಿರ್ದೇಶನಾಲಯ ನಿರ್ಮಿಸಲು ತಗಲುವ ಅಂದಾಜು ವೆಚ್ಚವನ್ನು ಮಂಜೂರಾತಿ ಮಾಡಿಕೊಂಡಿದ್ದಾಗ್ಯೂ ಹಾಗೂ ಈ ಬಗ್ಗೆ ಆಗಬೇಕಾದ ಎಲ್ಲಾ ಅನುಮತಿಗಳೂ ದೊರೆತಿದ್ದು ಆರೋಗ್ಯ ಇಲಾಖೆ ಸದರಿ ಶುಶ್ರೂಷ ನಿರ್ದೇಶನಾಲಯವನ್ನು ರಚಿಸುವ ಬಗ್ಗೆ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದಿರುವುದು ಶುಶ್ರೂಷಕರನ್ನು ತೀವ್ರ ಹತಾಶೆಗೆ ಗುರಿ ಮಾಡಿದೆ. ಈ ಬಗ್ಗೆ ಇನ್ನೂ ವಿಳಂಬ ಆದಲ್ಲಿ ತಮ್ಮ ಬೇಡಿಕೆಯ ಈಡೇರಿಕೆಗಾಗಿ ಶುಶ್ರೂಷಕರು ಮುಷ್ಕರ ಹೂಡುವ ನಿರ್ಧಾರ ಮಾಡಿದ್ದು, ಹಾಗೇನಾದರೂ ಅವರು ಮುಷ್ಕರಕ್ಕೆ ತೊಡಗಿದ್ದಲ್ಲಿ ರಾಜ್ಯದಲ್ಲಿ ಹಲವಾರು ಸರ್ಕಾರಿ ಆಸ್ಪತ್ರೆಗಳ ಕೆಲಸ ಅಸ್ತವ್ಯಸ್ತಗೊಂಡು ಸಹಸ್ರಾರು ರೋಗಿಗಳು ಹಾಗೂ ಸಾರ್ವಜನಿಕರು ತುಂಬಾ ತೊಂದರೆಗೆ ಒಳಗಾಗುವ ಸಂಭವ ಇರುವುದರಿಂದ, ಸರ್ಕಾರವು ಶುಶ್ರೂಷ ನಿರ್ದೇಶನಾಲಯವನ್ನು ರಚಿಸಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿಗಳು)— ಮಾನ್ಯ ಅಧ್ಯಕ್ಷರೇ, ೧೯೮೬-೮೭ನೇ ಸಾಲಿನಲ್ಲಿ ಆಯವ್ಯಯ ಮುಂಗಡ ಪತ್ರದಲ್ಲಿ ಪ್ರತ್ಯೇಕ ಶುಶ್ರೂಷ ನಿರ್ದೇಶನಾಲಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಭರವಸೆ ಇತ್ತಿದ್ದು, ಈ ಬಗ್ಗೆ ವಿವರಗಳನ್ನು ಪರಿಶೀಲಿಸಲಾಗುತ್ತಿದೆ. ಹಾಗೂ ಪ್ರತ್ಯೇಕ ಶುಶ್ರೂಷ ನಿರ್ದೇಶನಾಲಯದ ಬಗ್ಗೆ ಒಂದು ಉನ್ನತ ಮಟ್ಟದ ಸಮಿತಿ ರಚಿತವಾಗಿದ್ದು, ಅದರ ವರದಿಯ ಬೇರೆಗೆ ಹಾಗೂ ನಿರ್ದೇಶಕರ ಪ್ರಸ್ತಾವನೆ ಪರಿಶೀಲಿಸಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಕರ್ನಾಟಕ ಶುಶ್ರೂಷಕ ಸಂಘದ ಬೇಡಿಕೆಗಳನ್ನು ಸರ್ಕಾರ ಈಡೇರಿಸುತ್ತಾ ಬಂದಿದೆ. ಉದಾಹರಣೆಗೆ.

೧) ಶುಶ್ರೂಷಾ ದಾದಿಯವರಿಗೆ ೧೫ ದಿವಸಗಳ ವಿಶೇಷ ಸಂಬಳ ರಜೆ.

೨) ಶೇಕಡ ೪೦ರಷ್ಟು ವಿಶೇಷ ಸಂಬಳ (ಕ್ಷಯ, ಕುಷ್ಟ, ಸಾಂಕ್ರಾಮಿಕ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುವ ದಾದಿಯವರಿಗೆ)

೩) ೭-೦೦ ರೂಪಾಯಿ ವಾರದ ವಿಶೇಷ ಭತ್ಯೆ.

೪) ವಿದ್ಯಾರ್ಥಿ ವೇತನ ೨೨೬ ರೂ.ನಿಂದ ೩೮೦ಕ್ಕೆ ಮಂಜೂರಾತಿ ಮಾಡಿದೆ.

೫) ೪ ಶುಶ್ರೂಷ ಪರೀಕ್ಷಾ ಕೇಂದ್ರಗಳು.

೬) ಹಾಲಿ ೭ ಶುಶ್ರೂಷಾ ಶಾಲೆಗಳಿದ್ದು ಮತ್ತೊಂದು ಶಾಲೆಯನ್ನು ದಾವಣಗೆರೆಯಲ್ಲಿ ಸ್ಥಾಪಿಸಿದೆ.